**ಓ.ಎಸ್.ನಂಬ್ರ:481/2023 ಡಿ.ಡಬ್ಲ್ಯೂ :2**

ದಿನಾಂಕ: 25-04-2025 ರಂದು ಸಾಕ್ಷಿಯನ್ನು ಪುನ: ಕರೆಸಿ ಪ್ರಮಾಣೀಕರಿಸಲಾಯಿತು

**ಮುಂದುವರಿದ ಪಾಟಿ ಸವಾಲು: ಶ್ರೀ ಸಿ.ಆರ್.ಪಿ. ವಕೀಲರಿಂದ**

ಗಣಪ ಮತ್ತು ಸುಕ್ರುರವರಿಗೆ ವಿಲ್ಲು ಬರೆದುಕೊಡುವಾಗ 1999ನೇ ಇಸವಿಯಲ್ಲಿ ಸುಮಾರು 70 ವರ್ಷ ವಯಸ್ಸು. ಅವರಿಗೆ ಮಕ್ಕಳು ಇರಲಿಲ್ಲ. ಅವರಿಗೆ ವಯಸ್ಸಾದ ಕಾರಣ 1 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಅವರು 1ನೇ ಪ್ರತಿವಾದಿಯ ಮೇಲೆ ಅವಲಂಬಿತರಾಗಿದ್ದರು ಎಂದರೆ ಸರಿ. ಗಣಪರವರು ವಿಲ್ ಆದ 2 ತಿಂಗಳಲ್ಲಿ ತೀರಿ ಹೋಗಿರುತ್ತಾರೆ. ಸುಕ್ರು ರವರು ವಿಲ್ ಆದ 2 ವರ್ಷದ ನಂತರ ತೀರಿ ಹೋಗಿರುತ್ತಾರೆ. ಗಣಪ ಮತ್ತು ಸುಕ್ರುರವರು ವಿಲ್ ಮಾಡುವಾಗ ಆರೋಗ್ಯವಾಗಿದ್ದರು. ಗಣಪ ಮತ್ತು ಸುಕ್ರುರವರು ವಿಲ್ ತಯಾರಿಸುವ ದಿನ ಬೆಳಗ್ಗೆ ವಕೀಲರ ಕಚೇರಿಗೆ ಹೋಗಿರುತ್ತಾರೆ. ವಿಲ್ಲು ತಯಾರಿಸಲು ವಕೀಲರಿಗೆ ಮಾಹಿತಿಯನ್ನು ಎರಡನೇ ಪ್ರತಿವಾದಿ ನೀಡಿರುತ್ತಾರೆ. ಗಣಪ ಮತ್ತು ಎರಡನೇ ಪ್ರತಿವಾದಿ ವಾಪಸ್ಸು ಎಷ್ಟು ಗಂಟೆಗೆ ಬಂದಿದ್ದಾರೆ ಎಂದು ಗೊತ್ತಿಲ್ಲ. ನಾನು ಸಹಿ ಮಾಡಲು ಸಂಜೆ 04.00 ಗಂಟೆಗೆ ಅವರ ಮನೆಗೆ ಹೋಗಿದ್ದೇನೆ. ನಾನು ಹೋಗಿ ಸಹಿ ಮಾಡಿದ ನಂತರ ಗಣಪ ಮತ್ತು ಸುಕ್ರುರವರು ನಿಡಿ 2 ಮತ್ತು ನಿಡಿ 3 ದಾಖಲೆಗೆ ಹೆಬ್ಬೆಟ್ಟು ಹಾಕಿರುತ್ತಾರೆ. ನಿಡಿ 2 ಮತ್ತು 3 ದಾಖಲೆಯನ್ನು ನಾನು ಓದಿ ನೋಡಿರುತ್ತೇನೆ. ನಿಡಿ 2 ಮತ್ತು 3 ದಾಖಲೆಯಲ್ಲಿ ಕಿರಿಮಂಜೇಶ್ವರದ ಜಾಗವನ್ನು ಮಾತ್ರ ಸೇರಿದೆ ಎಂದರೆ ಸರಿ. ಕಂಬದಕೋಣೆಯಲ್ಲಿರುವ ಜಾಗವನ್ನು ಸೇರಿಸಿರುವುದಿಲ್ಲ ಎಂದರೆ ಸರಿ. ನಿಡಿ 2 ಮತ್ತು 3 ದಾಖಲೆಯನ್ನು ಗಣಪ ಮತ್ತು ಸುಕ್ರು ರವರಿಗೆ ನಾನು ಓದಿ ಹೇಳಿರುವುದಿಲ್ಲ. ನಾನು ಇರುವಾಗ ಅವರಿಗೆ ಯಾರೂ ಕೂಡಾ ಓದಿ ಹೇಳಿರುವುದಿಲ್ಲ. ಅವರಿಗೆ ಓದಿ ಹೇಳಿರುವ ಬಗ್ಗೆ ನಿಡಿ 2 ಮತ್ತು 3 ರಲ್ಲಿ ಉಲ್ಲೇಖ ಇರುವುದಿಲ್ಲ ಎಂದರೆ ಸರಿ. ನಾನು ಸಹಿ ಮಾಡುವಾಗ ಗಣಪ, ಸುಕ್ರು, 1 , 2 , 4 ನೇ ಪ್ರತಿವಾದಿ ಹಾಗು ವಾದಿಯನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ. ಮಂಜುನಾಥ ಆಚಾರಿಯವರು ನಾನು ಸಹಿ ಮಾಡಿದ ನಂತರ ಸಹಿ ಮಾಡಿರುತ್ತಾರೆ. ಆ ನಂತರ ಸುಕ್ರು ಮತ್ತು ಗಣಪರವರು ಹೆಬ್ಬೆಟ್ಟು ಹಾಕಿರುತ್ತಾರೆ. ಗಣಪ ಮತ್ತು ಸುಕ್ರುರವರು ವಿಲ್ ನಾಮೆ ಮಾಡಲು ಜಾಗದ ಮೇಲೆ ಅವರಿಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಗೊತ್ತಿಲ್ಲ. ಗಣಪ ಮತ್ತು ಸುಕ್ರುರವರಿಗೆ ವಿಲ್‌ನಾಮೆ ಮಾಡಲು ಮನಸ್ಸು ಇರಲಿಲ್ಲ ಹಾಗು 1 ಮತ್ತು 2 ನೇ ಪ್ರತಿವಾದಿಯರು ಒತ್ತಡ ಹೇರಿ ವಿಲ್

ನಾಮೆ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿರುವುದೆಲ್ಲಾ ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ**

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು

ಓ.ಹೇ.ಕೇ.ಸ.ಇದೆ

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಬೈಂದೂರು**